# ಪರೀಕ್ಷಾ ವಿಭಾಗ

ತಾಂತ್ರಿಕ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಅಧಿಸೂಚನೆಯನ್ವಯ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗಳನ್ನು ಪ್ರತಿ ವರ್ಷ 02 ಅವಧಿಗಳಲ್ಲಿ ನಡೆಸಲಾಗುವುದು. ವರ್ಷದ ಮೊದಲ ಅವಧಿಯಲ್ಲಿ 1 , 3 ಮತ್ತು 5ನೇ ಸೆಮಿಸ್ಟರ್ನ ರೆಗ್ಯುಲರ್ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದ ಪರೀಕ್ಷೆಯನ್ನೂ ಮತ್ತು 2, 4 ಮತ್ತು 6ನೇ ಸೆಮಿಸ್ಟರ್ನ ಅನುತ್ತೀರ್ಣ ವಿಷಯಗಳಿಗೆ ಭಾಗಶಃ ಪರೀಕ್ಷೆಗಳನ್ನು ನಡೆಸಲಾಗುವುದು. ಈ ಪರೀಕ್ಷೆಗಳು ಪ್ರತಿವರ್ಷ ನವಂಬರ್/ಡಿಸೆಂಬರ್ ತಿಂಗಳಿನಲ್ಲಿ ನಡೆಯುತ್ತವೆ.

ಎರಡನೇ ಅವಧಿಯಲ್ಲಿ 2 , 4 ಮತ್ತು 6ನೇ ಸೆಮಿಸ್ಟರ್ನ ರೆಗ್ಯುಲರ್ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದ ಪರೀಕ್ಷೆಯನ್ನೂ ಮತ್ತು 1, 3 ಮತ್ತು 5ನೇ ಸೆಮಿಸ್ಟರ್ನ ಅನುತ್ತೀರ್ಣ ವಿಷಯಗಳಿಗೆ ಭಾಗಶಃ ಪರೀಕ್ಷೆಗಳನ್ನು ನಡೆಸಲಾಗುವುದು.. ಈ ಪರೀಕ್ಷೆಗಳು ಪ್ರತಿವರ್ಷ ಏಪ್ರೀಲ್/ಮೇ ತಿಂಗಳಿನಲ್ಲಿ ನಡೆಯುತ್ತವೆ.

## ► ಪೂರ್ಣ ಪರೀಕ್ಷಾ ಶುಲ್ಕ (ರೆಗ್ಯುಲರ್ ವಿದ್ಯಾರ್ಥಿಗಳಿಗೆ)

| ಕ್ರ.ಸಂ | ವಿದ್ಯಾರ್ಥಿಗಳ ಪ್ರವರ್ಗ | ಶುಲ್ಕ ರೂ. |
|---|---|---|
| 01 | ಪ.ಜಾ/ಪ.ಪಂ ಮತ್ತು ಪ್ರವರ್ಗ-1 ವಿದ್ಯಾರ್ಥಿಗಳಿಗೆ | **50/-** |
| 02 | ವಾರ್ಷಿಕ ವರಮಾನ ರೂ. 1 ಲಕ್ಷಕ್ಕಿಂತ ಕಡಿಮೆ ಇರುವ 2ಎ, 3ಎ, 3ಬಿ ಮತ್ತು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ | **50/-** |
| 03 | ಪ್ರವರ್ಗ 2ಬಿ | **350/-** |

## ► ಅನುತ್ತೀರ್ಣ ವಿಷಯಗಳ ಪರೀಕ್ಷಾ ಶುಲ್ಕ

| ಕ್ರ.ಸಂ | ವಿಷಯಗಳು ಸೆಮಿಸ್ಟರ್ವಾರು | ವಿದ್ಯಾರ್ಥಿಗಳ ಪ್ರವರ್ಗ | ಶುಲ್ಕ ರೂ. |
|---|---|---|---|
| 01 | ಗರಿಷ್ಠ 06 ವಿಷಯಗಳು | ಪ.ಜಾ/ಪ.ಪಂ ಮತ್ತು ಪ್ರವರ್ಗ -1 ವಿದ್ಯಾರ್ಥಿಗಳಿಗೆ | **50/-** |
| 02 | 1 ಅಥವಾ 2 ವಿಷಯಗಳಿಗೆ | ಪ್ರವರ್ಗ 2ಎ, 2ಬಿ 3ಎ, 3ಬಿ ಮತ್ತು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ | **250/-** |
| 03 | 3 ಅಥವಾ ಹೆಚ್ಚು | | **350/-** |

## ► ಮರುಮೌಲ್ಯಮಾಪನ ಮತ್ತು ಉತ್ತರ ಪತ್ರಿಕೆಯ ಛಾಯಾ ಪ್ರತಿ ಶುಲ್ಕ

1. ಮರುಮೌಲ್ಯಮಾಪನ ಶುಲ್ಕ ಪ್ರತಿ ವಿಷಯಕ್ಕೆ ರೂ. 550/- (ಎಲ್ಲ ಪ್ರವರ್ಗದ ವಿದ್ಯಾರ್ಥಿಗಳಿಗೆ ಪ.ಜಾ/ಪ.ಪಂ ವಿದ್ಯಾರ್ಥಿಗಳನ್ನೊಳಗೊಂಡು)
2. ಉತ್ತರ ಪತ್ರಿಕೆಯ ಛಾಯಾ ಪ್ರತಿ ವಿಷಯಕ್ಕೆ ರೂ. 250/- (ಎಲ್ಲ ಪ್ರವರ್ಗದ ವಿದ್ಯಾರ್ಥಿಗಳಿಗೆ ಪ.ಜಾ/ಪ.ಪಂ ವಿದ್ಯಾರ್ಥಿಗಳನ್ನೊಳಗೊಂಡು)

## ► ಅಂಕಪಟ್ಟಿಯ ದ್ವಿಪ್ರತಿ (Duplicate Marks Card) ಶುಲ್ಕ

ತಾಂತ್ರಿಕ ಪರೀಕ್ಷಾ ಮಂಡಳಿ ಬೆಂಗಳೂರು ಇವರಿಂದ ನಕಲು ಅಂಕಪಟ್ಟಿಗಳನ್ನು ಪಡೆಯಲು, ಮಂಡಳಿಯು ನಿಗದಿ ಪಡಿಸಿರುವ ಶುಲ್ಕ ರೂ. 400/- (ಪ್ರತಿ ಅಂಕಪಟ್ಟಿಗೆ) ಪಾವತಿಸಿ ಈ ಕೆಳಕಂಡ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

1. ಅಭ್ಯರ್ಥಿಯ ಅರ್ಜಿ
2. ಪೊಲೀಸ್ ವರದಿ
3. ನೋಟರಿಯವರ ಸಹಿಯೊಂದಿಗೆ ಪಡೆದ ಅಫಿಡವಿಟ್
4. ಖಜಾನೆ -2 ಮೂಲಕ ಶುಲ್ಕ ಪಾವತಿಸಿದ ಚಲನ್ ಪ್ರತಿ

## ► ಡಿಪ್ಲೋಮಾ ಪದವಿ ಪ್ರಮಾಣ ಪತ್ರ

1 ರಿಂದ 6ನೇ ಸೆಮಿಸ್ಟರ್ಗಳಲ್ಲಿ ಯಾವುದೇ ಬಾಕಿ ವಿಷಯಗಳನ್ನು ಉಳಿಸಿಕೊಳ್ಳದೇ ಉತ್ತೀರ್ಣರಾಗುವ ಅರ್ಹ ಅಭ್ಯರ್ಥಿಗಳಿಗೆ ಡಿಪ್ಲೋಮಾ ಪದವಿ ಪ್ರಮಾಣ ಪತ್ರವನ್ನು ನೀಡಲಾಗುವುದು. ತಾಂತ್ರಿಕ ಪರೀಕ್ಷಾ ಮಂಡಳಿ ಬೆಂಗಳೂರು ಇವರಿಂದ ಡಿಪ್ಲೋಮಾ ಪದವಿ ಪ್ರಮಾಣ ಪತ್ರವನ್ನು ಪಡೆಯಲು ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬಹುದಾಗಿದೆ.

1. ಅಭ್ಯರ್ಥಿಯ ಅರ್ಜಿ
2. 1 ರಿಂದ 6ನೇ ಸೆಮಿಸ್ಟರ್ನ ದೃಢೀಕೃತ ಜೆರಾಕ್ಸ್ ಅಂಕಪಟ್ಟಿಗಳು
3. ಪಾಸ್ ಪೋರ್ಟ ಸೈಜ್‌ನ 04 ಭಾವಚಿತ್ರಗಳು

**ಡಿಪ್ಲೋಮಾ ಪದವಿ ಪ್ರಮಾಣ ಪತ್ರವನ್ನು ವಿದ್ಯಾರ್ಥಿಯು ಅರ್ಜಿ ಸಲ್ಲಿಸಿದ 30 ದಿನಗಳೊಳಗಾಗಿ ಸಕಾಲ ವ್ಯವಸ್ಥೆಯಲ್ಲಿ ತ್ವರಿತವಾಗಿ ಮತ್ತು ಉಚಿತವಾಗಿ ನೀಡಲಾಗುವುದು.**